**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ**

**ಸಿ.ಸಿ. ನಂ. 622/2019**

**ಸಿ.ಡಬ್ಲ್ಯೂಃ 4   ಪಿ.ಡಬ್ಲ್ಯೂಃ 3**

| | | |
|---|---|---|
| ಸಾಕ್ಷಿದಾರನ ಹೆಸರು | : | ಎಚ್ ಬಸವರಾಜ |
| ತಂದೆಯ ಹೆಸರು | : | ದಾನಪ್ಪಗೌಡ |
| ವಯಸ್ಸು | : | 50 ವರ್ಷ |
| ಕೆಲಸ | : | ಗ್ಯಾಸ್ ಏಜನ್ಸಿಯಲ್ಲಿ ಕೆಲಸ |
| ವಾಸ | : | ಸಿರುಗುಪ್ಪ |

**ಸಾಕ್ಷಿಗೆ ದಿನಾಂಕಃ 22.12.2025 ರಂದು ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ**

1. ನನಗೆ ಚಾಸಾ 1, 5 ಮತ್ತು 6 ಪರಿಚಯ. ಆರೋಪಿ ನಂ 1 ಗೊತ್ತು. ನಾನು ಸುಮಾರು 35 ವರ್ಷಗಳಿಂದ ಕೃಷ್ಣಾ ಗ್ಯಾಸ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೇನೆ. 2015 ರಲ್ಲಿ 1 ನೇ ಆರೋಪಿ ನನಗೆ 25 ಸಾವಿರದ ಚೆಕ್ ಕೊಟ್ಟಿದ್ದರು. ನಾನು ಅದನ್ನು ಮೈಸೂರು ಬ್ಯಾಂಕ್ ನಲ್ಲಿರುವ ನನ್ನ ಖಾತೆಗೆ ಸಲ್ಲಿಸಿ ನಗದೀಕರಿಸಿ 2-3 ದಿನಗಳ ನಂತರ ಹಣವನ್ನು 1 ನೇ ಆರೋಪಿಗೆ ಬ್ಯಾಂಕ್ ನಿಂದ ಬಿಡಿಸಿಕೊಟ್ಟಿರುತ್ತೇನೆ. ದಿಃ 18.01.2016 ರಲ್ಲಿ 1 ನೇ ಆರೋಪಿ 30 ಸಾವಿರದ ಮತ್ತೊಂದು ಚೆಕ್ ನ್ನು ನೀಡಿದ್ದರು. ಅದನ್ನು ನಾನೇ ಸಹಿ ಮಾಡಿ ಹಣವನ್ನು ಬಿಡಿಸಿಕೊಂಡು 1 ನೇ ಆರೋಪಿಗೆ ಕೊಟ್ಟಿದ್ದೆ. ಸದರಿ ಚೆಕ್ ಗ್ಯಾಸ್ ಅಂಗಡಿಯ ಖಾತೆಯದ್ದಾಗಿತ್ತು. ಹೀಗೆ ಒಟ್ಟು ನಾನು 55 ಸಾವಿರವನ್ನು 1 ನೇ ಆರೋಪಿಗೆ ಕೊಟ್ಟಿದ್ದೇನೆ. ಇಷ್ಟು ವಿಚಾರ ಬಿಟ್ಟು ಬೇರೆ ಎನು ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಕೋರಿರುತ್ತಾರೆ. ಪ್ರಕರಣದ ವಾಸ್ತವಾಂಶ, ಸಾಕ್ಷಿಯ ಹೇಳಿಕೆ ಮತ್ತು ದೋಷರೋಪಣೆಗಳನ್ನು ಗಮನಿಸಿ ಸಾಕ್ಷಿಯು ಅಭಿಯೋಜನ ಪ್ರಕರಣಕ್ಕೆ ಸಂಪೂರ್ಣವಾಗಿ ಬೆಂಬಲಿಸದೆ ಇದ್ದ ಕಾರಣ ಮಾನ್ಯ ಎಪಿಪಿ ಯವರು ಕೋರಿಕೆಯನ್ನು ಪರಿಗಣಿಸಿ ಪಾಟಿ ಸವಾಲಿಗೆ ಅವಕಾಶ ನೀಡಲಾಯಿತು)**

**ಪಾಟಿ ಸವಾಲುಃ ಮಾನ್ಯ ಎಪಿಪಿ ಯವರಿಂದಃ**

3. 1 ನೇ ಆರೋಪಿ 2015 ರಲ್ಲಿ ತನ್ನ ಆರೋಗ್ಯ ಸರಿ ಇಲ್ಲದ ಕಾರಣಕ್ಕೆ ಚಾಸಾ 1 ರವರ ಗ್ಯಾಸ್ ಏಜೆನ್ಸಿಸಿ ಪಾಲುಗಾರಿಕೆ ಇಂದ ನಿವೃತ್ತಿ ಪತ್ರವನ್ನು ಬರೆದುಕೊಟ್ಟರು ಎಂದರೆ ಸರಿಯಲ್ಲ. ನಂತರ 1 ನೇ ಆರೋಪಿ ಪಲುಗಾರಿಕೆ ಹಣವನ್ನು ಚಾಸಾ 1 ರವರಿಂದ ಪಡೆದು ಎಸ್ ಬಿ ಐ ಬ್ಯಾಂಕ್ ನಲ್ಲಿರುವ

ಜಂಟಿ ಖಾತೆಯಲ್ಲಿ ತನ್ನ ಸಹಿಯ ಚೆಕ್ಕುಗಳನ್ನು ಮಾನ್ಯ ಮಾಡಬಾರದೆಂದು 1 ನೇ ಆರೋಪಿ ಪತ್ರ ಬರೆದಿದ್ದರು ಎಂದರೆ ನೆನಪಿಲ್ಲ. ನಿವೃತ್ತಿ ಹೊಂದಿದ ನಂತರ 1 ನೇ ಆರೋಪಿ ಗ್ಯಾಸ್ ಏಜೆನ್ಸಿಸಿ ಗೆ ಬಂದು ಹೋಗುತ್ತಿದ್ದನು ಎಂದರೆ ಸರಿ. 1 ನೇ ಆರೋಪಿ ಅಂಗಡಿಯಿಂದ 4 ಚೆಕ್ಕುಗನ್ನು ಕಳುವು ಮಾಡಿ ನನ್ನ ಮೂಲಕ 2 ಚೆಕ್ಕು ಹಾಗೂ ಚಾಸಾ 5 ಮತ್ತು 6 ರವರ ಮೂಲಕ ಹಣವನ್ನು ಡ್ರಾ ಮಾಡಿಸಿ ಒಟ್ಟು 1,65,000 ರೂ ಹಣ ಪಡೆದು ಚಾಸಾ 1 ರವರಿಗೆ ನಂಬಿಕೆ ದ್ರೋಹ ಮೋಸ ಮಾಡಿರುತ್ತಾನೆ ಎಂದರೆ ನೆನಪಿಲ್ಲ. ಈ ಬಗ್ಗೆ ಚಾಸಾ 1 ರವರು ದೂರು ಕೊಟ್ಟಿರುತ್ತಾರೇ ಎಂದರೆ ಸರಿ.

**ಪಾಟೀ ಸವಾಲು ಆರೋಪಿ ನಂ 1 ಪರ ಶ್ರಿ ಎಂ ಬಿ ಜೆ ವಕೀಲರಿಂದ**

4. ಚಾಸಾ 1 ಯಾವಾಗ ದೂರು ಕೊಟ್ಟರು ಎಂದು ಗೊತ್ತಿಲ್ಲ. ಅವರು ಎಲ್ಲಿ ದೂರು ಕೊಟ್ಟರು ನೆನಪಿಲ್ಲ. ಚಾಸಾ 1 ಆರೋಪಿ ನಂ 1 ರ ಮೇಲೆ ಹಲವಾರು ದೂರು ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಕೃಷ್ಣಾ ಗ್ಯಾಸ್ ಏಜೆನ್ಸಿಸಿ ಇರುವ ಜಾಗ, ಕಟ್ಟಡ 1 ನೇ ಆರೋಪಿಗೆ ಸೇರಿದ್ದು ಎಂದರೆ ಸರಿ. ಗ್ಯಾಸ್ ಏಜೆನ್ಸಿಸಿ ಚಾಸಾ 1 ಮತ್ತು 1 ನೇ ಆರೋಪಿಯ ಜಂಟಿ ಮಾಲೀಕತ್ವದಲ್ಲಿ ಇದೆ ಎಂದರೆ ಸಾಕ್ಷಿ 30 ವರ್ಷಗಳ ಕಾಲ ಅದು ಆರೋಪಿ ನಂ 1 ರವರದ್ದು ಆಗಿತ್ತು. 2015 ರಿಂದ ಇಚೆಗೆ ಅದು ಚಾಸಾ 1 ರವರದ್ದು ಎಂದು ಹೇಳುತ್ತಾರೆ. ಆ ಬಗ್ಗೆ ನಾನು ದಾಖಲೆ ನೋಡಿಲ್ಲ. 1 ನೇ ಆರೋಪಿ ನನಗೆ ಮೊದಲು ನೀಡಿದ ಚೆಕ್ಕ ನಂಬರ್ ನನಗೆ ಹೇಳಲು ಅಗುತ್ತದೆ. ಅದು ಯಾರ ಹೆಸರಿನಲ್ಲಿ ಇತ್ತು ಎಂದು ಗೊತ್ತಿಲ್ಲ. ಸದರಿ ಚೆಕ್ ನಲ್ಲಿ ಇದ್ದ ದಿನಾಂಕ 09.12.2015. ಸದರಿ ಚೆಕ್ಕಿಗೆ ನಾನು ಸಹಿ ಮಾಡಿ ಹಣವನ್ನು ಪಡೆದೆನು. ಅದು 25 ಸಾವಿರದ ಮೊತ್ತದಾಗಿತ್ತು. ಚೆಕ್ ಸಂಖ್ಯೆ 234513 ಎಂದು ಇತ್ತು. ಆ ಸಂಖ್ಯೆಯುಳ್ಳ ಚೆಕ್ಕನ್ನು 1 ನೇ ಆರೋಪಿ ನನಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು 1 ನೇ ಆರೋಪಿ ನೀಡಿದ ಯಾವುದೇ ಚೆಕ್ಕನ್ನು ಬಳಸಿ ಹಣ ಬಿಡಿಸಿಕೊಂಡು ಬಂದಿಲ್ಲ ಎಂದರೆ ಸರಿಯಲ್ಲ. ಯಾವುದೇ ಚೆಕ್ಕನ್ನು ಅದರ ಮೇಲೆ ಹೆಸರು ಇದ್ದರೆ ಮಾತ್ರ ಹಣ ಬಿಡಿಸಿಕೊಳ್ಳಬಹುದು ಎಂದರೆ ಸರಿ. 1 ನೇ ಆರೋಪಿ ನನಗೆ ನೀಡಿದ ಚೆಕ್ ಸೇಲ್ಪ ಚೆಕ್ ಅಲ್ಲ ಎಂದರೆ ನೆನಪಿಲ್ಲ. 2 ನೇ ಚೆಕ್ ಸಂಖ್ಯೆ 234519. ಅದರಲ್ಲಿ 30 ಸಾವಿರ ರೂಪಾಯಿ ಎಂದು ಬರೆದಿದ್ದರು. ಅದರ ಮೇಲೆ 18.01.2016 ಎಂದು ಬರೆದಿದ್ದರು. ಚೆಕ್ ಸಂಖ್ಯೆ 234519 ನೇದ್ದನ್ನು 1 ನೇ ಆರೋಪಿ ನನಗೆ ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ಚೆಕ್ ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಅದನ್ನು ನಗದೀಕರಿಸಿದ ನಂತರ ಬ್ಯಾಂಕ್ ನವರು ಕೊಟ್ಟ ಹಣದ ಮುಖಬೆಲೆ ಎಷ್ಟು ಇತ್ತು ಎಂದು ನೆನಪಿಲ್ಲ. ನಾನು ಹಣವನ್ನು 1 ನೇ ಆರೋಪಿ ಮನೆಗೆ ಹೋಗಿ ಕೊಟ್ಟಿದ್ದೆ. ಪ್ರಕರಣ ಎಷ್ಟು ಚೆಕ್ ಗಳಿಗೆ ಸಂಬಂದಪಟ್ಟಂತೆ ಇರುತ್ತದೆ ಎಂದು ಗೊತ್ತಿಲ್ಲ. ಪೋಲಿಸರ ಮುಂದೆ ನಾನು ಯಾವ ದಿನ ಹೇಳಿಕೆ ಕೊಟ್ಟಿದ್ದೆ ನೆನಪಿಲ್ಲ. ಪೋಲಿಸರು ನನ್ನ ಹೇಳಿಕೆಯಲ್ಲಿ ಎನು ಬರೆದಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಚೆಕ್ ನಂಬರ್ ಮತ್ತು ದಿನಾಂಕದ ಬಗ್ಗೇ ಹೇಳಿದ್ದೆನೆ. ಪೋಲಿಸರು ನನಗೆ

ಹೇಳಿಕೆಯನ್ನು ಓದಿ ಹೇಳಿಲ್ಲ. ಚಾಸಾ 1 ರವರ ಮಾತು ಕೇಳಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ನಂ 2 ಪರ ಶ್ರಿ ಎಂ ಎಸ್ ಕೆ ವಕೀಲರಿಂದ**

1. ನನಗೆ 2 ನೇ ಆರೋಪಿ ಯಾರು ಎಂದು ನೆನಪಿಲ್ಲ. 2 ನೇ ಆರೋಪಿ ಎನು ಕೆಲಸ ಮಾಡುತ್ತಾರೆ ಎಂದು ಗೊತ್ತಿಲ್ಲ. 2 ನೇ ಆರೋಪಿ ವಿರುದ್ಧ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು-ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**

**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ**

**ಸಿ.ಸಿ. ನಂ. 622/2019**

**ಸಿ.ಡಬ್ಲ್ಯೂ: 1 ಪಿ.ಡಬ್ಲ್ಯೂ: 1**

**ಸಾಕ್ಷಿಗೆ ದಿನಾಂಕಃ 22.12.2025 ರಂದು ಪ್ರಮಾಣ ವಚನ ಬೋಧಿಸಲಾಯಿತು**

**ಪಾಟಿ ಸವಾಲುಃ 2 ನೇ ಆರೋಪಿ ಪರ ಶ್ರಿ ಎಂ ಜಿ ರವರ ಪರವಾಗಿ ಶ್ರೀ ಎಸ್ ಎ ಆರ್ ವಕೀಲರಿಂದ**

3. ಆರೋಪಿ ನಂ 2 ರವರ ಹೆಸರು ರಾಮು ಆರ್ ಎಂದು ಇರುತ್ತದೆ. ನನಗೂ 2 ನೇ ಆರೋಪಿತರಿಗೂ ಯಾವುದೇ ಸ್ನೇಹ ಸಂಬಂಧ ಇರುವುದಿಲ್ಲ. ನಾನು ಪೋಲಿಸರ ಮುಂದೆ ಮರುಹೇಳಿಕೆಯನ್ನು ನೀಡಿದ್ದು ಯಾವಾಗ ಎಂದು ಗೊತ್ತಿಲ್ಲ. ನಾನು ಹಾಗೂ 1 ನೇ ಆರೋಪಿ ಕೂಡಿ ಬ್ಯಾಂಕಿಗೆ ಹೋದ ದಿನ 14.10.2015. ಎರಡನೇ ಆರೋಪಿ ಆ ದಿನ ಬ್ಯಾಂಕಿನ ಪ್ರಭಾರ ಮ್ಯಾನೇಜರ್ ಆಗಿದ್ದರು. ಆ ಬಗ್ಗೆ ನಾನು ದಾಖಲೆ ಪಡೆದಿಲ್ಲ. 2 ನೇ ಆರೋಪಿಯ ಬಗ್ಗೆ ಪಿ ಸಿ ಅರ್ ನಂ 29/2017 ಮತ್ತು ನಿಪಿಃ 1 ರಲ್ಲಿ ಹೇಳಿಲ್ಲ. ಕಾರಣ 2 ನೇ ಆರೋಪಿ ಬಗ್ಗೆ ನನಗೆ ಗೊತ್ತಿರಲಿಲ್ಲ. 2 ನೇ ಆರೋಪಿ ಅಸಿಸ್ಟಂಟ್ ಮ್ಯಾನೇಜರ್ ಇದ್ದ ಬಗ್ಗೆ ನನಗೆ ಮೊದಲೇ ಗೊತ್ತಿರಲಿಲ್ಲ. ಆರೋಪಿ ನಂ 2 ರವರು ನಾನು ಹಾಗೂ 1 ನೇ ಆರೋಪಿ ದಿಃ 14.10.2015 ರಂದು ನೀಡಿದ ಪತ್ರವನ್ನು ಟೇಬಲ್ ಡ್ರಾ ದಲ್ಲಿ ಇಟ್ಟಿರಬಹುದು ಎಂದು ನನಗೆ ಎಸ್ ಬಿ ಐ ಬ್ಯಾಂಕ್ ಮ್ಯಾನೇಜರ್ ತಿಳಿಸಿದರು.

2. ನನ್ನ ಚೆಕ್ಕುಗಳು ಡಿಸೆಂಬರ್ 2015 ಮತ್ತು ಜನವರಿ 2016 ರಂದು ವ್ಯವಹಾರಣೆಗಳು ಆಗಿರುತ್ತವೆ ಎಂದರೆ ಸರಿ. ದಿಃ 27.12.2015 ರಂದು 2 ನೇ ಆರೋಪಿ ಸಿರುಗುಪ್ಪ ಬ್ಯಾಂಕ್ ಶಾಖೆಯಿಂದ ವರ್ಗಾವಣೆ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ 30.11.2018 ಕ್ಕಿಂತ ಮೊದಲು 2 ನೇ ಆರೋಪಿ ವಿರುದ್ದ ನಾನು ಯಾವುದೇ ಅಪಾದನೆ ಮಾಡಿರುವುದಿಲ್ಲ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದುಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ.**